**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆ ಇಲಾಖೆ**

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌವತೆ ಬೆಳಗಾವಿ  ವಿಭಾಗ, ಬೆಳಗಾವಿ**
**1ನೇ ಮಹಡಿ, ಸಿಟಿಎಸ್ ಸಂ.4871, ಕ್ಲಬ ರಸ್ತೆ, ಬೆಳಗಾವಿ.**

**ಸಂಖ್ಯೆ: ವಾ.ತೆ.ಜಂ.ಆ/ಡಿ.ವಿ.ಓ/ಬೆ/ಆಧುನೀಕರಣ/2010-2011/ ದಿನಾಂಕ: 29/01/2011.**

## ಟೆಂಡರ ಪ್ರಕಟಣೆ

ಟೆಂಡರಗಳನ್ನು ಎರಡು ಲಕೋಟೆಗಳಲ್ಲಿ ಸಲ್ಲಿಸುವ ಪದ್ದತಿಯಲ್ಲಿ ಕರೆಯಲಾಗಿದ್ದು, ಟೆಂಡರನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು, (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ, ಸಿಟಿಎಸ್ ಸಂ.4871, ಕ್ಲಬ್ ರಸ್ತೆ, ಬೆಳಗಾವಿ. ಕಟ್ಟಡದಲ್ಲಿ ಮತ್ತು ಈ ವಿಭಾಗದ ಆಧೀನ ಕಚೇರಿಗಳ ಅಭಿಲೇಖಾಲಯಗಳಲ್ಲಿ ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ  ಪೂರೈಕೆ ಮಾಡುವುದು ಮತ್ತು ಟೆಂಡರ ಪ್ರಸ್ತಾವನೆಯಲ್ಲಿ ಸೂಚಿಸಿದಂತೆ ಸ್ಥಾಪನೆ ಮಾಡುವ ಕುರಿತು ಐಟಂವಾರು ಟೆಂಡರುಗಳನ್ನು ಕರೆಯಲಾಗಿದ್ದು, ಸದರಿ ಟೆಂಡರ ಹಾಗೂ ಪ್ರಸ್ತಾವನೆ ಅರ್ಜಿ (Request for proposal) (RFP)ಗಳನ್ನು website http//: ctax.kar.nic.in ನಿಂದ ಡೌನಲೋಡ ಮಾಡಿಕೊಂಡು ಸ್ಟೇಟ ಬ್ಯಾಂಕ ಆಫ್ ಇಂಡಿಯಾದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಲೆಕ್ಕ ಶೀರ್ಷಿಕೆ 0040-00-102-0-06 ಕ್ಕೆ ಜಮೆ ಮಾಡಿದ ಚಲನನೊಂದಿಗೆ ಟೆಂಡರ ಫಾರ್ಮನ್ನು ಈ ಕಚೇರಿಗೆ ಸಲ್ಲಿಸಬಹುದು. ಅಲ್ಲದೇ ದಿನಾಂಕ:29/01/2011 ರಿಂದ 05/02/011ರ 4:00ಗಂಟೆ ವರೆಗೆ ಕಛೇರಿಯ ಸಮಯದಲ್ಲಿ ಟೆಂಡರ ಫಾರ್ಮಗಳನ್ನು, ಪ್ರತಿ ಟೆಂಡರ ಅರ್ಜಿ ಮೌಲ್ಯ ರೂ. 500/- + 68 ವ್ಯಾಟನ್ನು ಸೇರಿ ಒಟ್ಟು ರೂ. 568/-ಗಳಿಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಬೆಳಗಾವಿ ಇವರ ಹೆಸರಿನಲ್ಲಿ ಡಿ. ಡಿ. ಪಡೆದು ಅರ್ಜಿಯೊಂದಿಗೆ ಸಲ್ಲಿಸಿ ಈ ಕಚೇರಿಯಿಂದಲೂ ಪಡೆಯಬಹುದು.

ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: **07-02-2011** ಸಂಜೆ **4-00** ಗಂಟೆವರೆಗೆ
ಟಂಡರ ತೆರೆಯುವ ದಿನಾಂಕ **08-02-2011** ಬೆಳಿಗೆ **11-00** ಗಂಟೆಗೆ (ಟೆಕ್ನಿಕಲ್ ಬಿಡ್)

ಟೆಂಡರನಲ್ಲಿ ಭಾಗವಹಿಸುವ  ಏಜೆನ್ಸಿಗಳು ಟೆಂಡರನಲ್ಲಿ ವಿಧಿಸಿರುವ ಎಲ್ಲ ಷರತ್ತುಗಳನ್ನು ಪೂರೈಸಬೇಕು.

--ಸಹಿ--

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ)**
**ಮೌಲ್ಯ ವರ್ಧಿತ ತೆರಿಗೆ, ಬೆಳಗಾವಿ ವಿಭಾಗ,**
**ಬೆಳಗಾವಿ**

**<u>ಮೊದಲನೇಯ ಲಕೋಟೆ ಟೆಕ್ನಿಕಲ್/ಅರ್ಹತಾಪೂರ್ವ ಬಿಡ್‌ಗೆ ಸಂಬಂದ ಪಟ್ಟಂತೆ ಮಾಹಿತಿಯನ್ನು ಹೊಂದಿರತಕ್ಕದ್ದು:</u>**

(1) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ನಿಗದಿತ ನಮೂನೆಯಲ್ಲಿ (RFPಗೆ ಲಗತ್ತಿಸಿದ ಅನುಬಂಧ–1ರಲ್ಲಿ ಕಾಣಿಸಿರುವಂತೆ) ಎಲ್ಲ ವಿವರಗಳನ್ನು ನಮೂದಿಸಿರಬೇಕು.

(2) ಭಾರತೀಯ ಆದಾಯ ತೆರಿಗೆ ಕಾಯ್ದೆ – 1957 ರಂತೆ ಇಲಾಖೆಯವರು ನೀಡಿದ ಪಾನ ನಂಬರನ ಮಾಹಿತಿಯನ್ನು ನೀಡಬೇಕು.

(3) ಬಿಡ್ ಸಲ್ಲಿಸುವ ಏಜೆನ್ಸಿಗಳು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಸುವ ಮತ್ತು ಸ್ಥಾಪಿಸುವ ಅನುಭವನ್ನು ಹೊಂದಿರಬೇಕು. ಹಾಗೂ ಪ್ರಥಮವಾಗಿ ಮೊದಲನೆಯ ಲಕೋಟೆಯಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ **ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಬಗ್ಗೆ ಟೆಂಡರು (ಟೆಕ್ನಿಕಲ್ ಬಿಡ್)"** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

**<u>ಎರಡನೆಯ ಲಕೋಟೆ–ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿರತಕ್ಕದ್ದು :</u>**

1) ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ (ಆರ್.ಎಫ್.ಪಿ.ಗೆ ಲಗತ್ತಿಸಿದ ಅನುಬಂಧ–2ರಲ್ಲಿ ಕಾಣಿಸಿರುವಂತೆ) ಎಲ್ಲ ವಿವರಗಳನ್ನು ನಮೂದಿಸಿರಬೇಕು. ಹಾಗೂ ಸದರಿ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ **ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಬಗ್ಗೆ ಟೆಂಡರು (ಫೈನಾನ್ಸಿಯಲ್ ಬಿಡ್)"** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

2) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ ಲಕೋಟೆ ಹಾಗೂ ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಲಕೋಟೆ, ಈ 2 ಲಕೋಟೆಗಳನ್ನು ದೊಡ್ಡದಾದ ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ಅದರ ಮೇಲೆ **ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಬಗ್ಗೆ ಟೆಂಡರು"** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು. ಹಾಗೂ ಈ ಲಕೋಟೆಯು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತರು, (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ, ಸಿಟಿಎಸ್ ಸಂ.4871, ಕ್ಲಬ ರಸ್ತೆ, ಬೆಳಗಾವಿ. ಇವರ ಹೆಸರಿನಲ್ಲಿರಬೇಕು. ಹಾಗೂ ಮೇಲ್ಕಾಣಿಸಿದ ಟೆಂಡರುಗಳು ಯಾವುದೇ ಕರಾರು ಅಥವಾ ಷರತ್ತಿಗೆ ಒಳಪಟ್ಟಿರಬಾರದು. ಒಂದುವೇಳೆ ಯಾವುದೇ ಕರಾರು ಅಥವಾ ಷರತ್ತುಗಳು ವಿಧಿಸಿದ್ದು ಕಂಡು

ಬಂದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು.ಹಾಗೂ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ಪರಿಗಣಿಸಲಾಗುವುದು.

3) ಭರ್ತಿ ಮಾಡಿದ ಟೆಂಡರಿನ ಎರಡೂ ಲಕೋಟೆಗಳನ್ನು/ಅರ್ಜಿಗಳನ್ನು ದಿನಾಂಕ:07/02/ 2011ರ ಸಾಯಂಕಾಲ 4–00ರೊಳಗಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಕ್ಲಬ್ ರಸ್ತೆ, ಬೆಳಗಾವಿ ಇವರ ಕಚೇರಿಯಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಯಾವುದೇ ಟೆಂಡರು ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

4) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ ಲಕೋಟೆಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಸಿಟಿಎಸ್ ಸಂ.4871, ಕ್ಲಬ್ ರಸ್ತೆ, ಬೆಳಗಾವಿ. ಇವರಕಚೇರಿಯಲ್ಲಿ ದಿನಾಂಕ: 08/02/2011ರಂದು ಬೆಳಿಗ್ಗೆ 11–00 ಗಂಟೆಗೆ ಹಾಜರಿದ್ದ ಬಿಡ್ಡುದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಹಾಗೂ ಅರ್ಹತಾಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರುದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯ ಪ್ಯಾರಾ–7.3ರಲ್ಲಿ ಸೂಚಿಸಿದ ದಿನಾಂಕದಂದು ತೆರೆಯಲಾಗುವುದು. ಈ ಕುರಿತಂತೆ ಯಾವುದೇ ಬಿಡ್ಡುದಾರರಿಗೆ ವೈಯಕ್ತಿಕವಾಗಿ ಲಿಖಿತವಾಗಿ ಸೂಚನೆಯನ್ನು ನೀಡಲಾಗುವುದಿಲ್ಲ.

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ)**
**ಮೌಲ್ಯ ವರ್ಧಿತ ತೆರಿಗೆ, ಬೆಳಗಾವಿ ವಿಭಾಗ,**
**ಬೆಳಗಾವಿ**

**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ (CTD)**

**ಬೆಳಗಾವಿ.**

## ಪ್ರಸ್ತಾವನಾ ವಿನಂತಿ (Request for Proposal)

**ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು, (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ, ಕ್ಲಬ್ ರಸ್ತೆ, ಬೆಳಗಾವಿ ಕಟ್ಟಡದಲ್ಲಿ ಮತ್ತು ಈ ವಿಭಾಗದ ಆಧೀನ ಕಚೇರಿಗಳ ಅಭಿಲೇಖಾಲಯಗಳಿಗೆ ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಮಾಡುವ ಕುರಿತು ಟೆಂಡರು**

ಪ್ರಸ್ತಾವನಾ ವಿನಂತಿಯನ್ನು ಸಲ್ಲಿಸಬೇಕಾದ ವಿಳಾಸ:

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)**
**ಮೌಲ್ಯ ವರ್ಧಿತ ತೆರಿಗೆ ಸಿಟಿಎಸ್ ಸಂ.4871, ಕ್ಲಬ್ ರಸ್ತೆ, ಬೆಳಗಾವಿ.**
**ದೂರವಾಣಿ ಸಂಖ್ಯೆ: 0831 -2407366**
**Website: http://ctax.kar.nic.in**

**ಪರಿವಿಡಿ**


| ಕ್ರಮ ಸಂಖ್ಯೆ. | ವಿವೆರಗಳು. ಪುಟಗಳು | ಪುಟಗಳು | |
|---|---|---|---|
| | | ಇಂದ | ವರೆಗೆ. |
| 1 | ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪಿಸುವ ಏಜೆನ್ಸಿಗಳ ಅರ್ಹತೆ. | 6 | 6 |
| 2 | ಅನುಭವ | 6 | 6 |
| 3 | ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ | 6 | 7 |
| 4 | ಮಾದರಿಯನ್ನು (ಸ್ಯಾಂಪಲ್) ಹಾಜರ ಪಡಿಸುವುದು | 7 | 7 |
| 5 | ಗುಣಮಟ್ಟ | 7 | 7 |
| 6 | ಬಿಡ್ಡಗಳ ಸಲ್ಲಿಕೆ | 8 | 9 |
| 7 | ಬಿಡ್ಡುಗಳ ತೆರೆಯುವ ಪ್ರಕ್ರಿಯೆ | 9 | 10 |
| 8 | ಬಿಡ್ಡುಗಳಲ್ಲಿಯ ಸಹಿ ಕುರಿತು | 10 | 10 |
| 9 | ಪ್ರಸ್ತಾವನೆಯಲ್ಲಿ ಕರಾರುಗಳನ್ನು ಷರತ್ತುಗಳನ್ನು ತಿದ್ದುಪಡಿ/ರದ್ದು ಪಡಿಸುವ ಕುರಿತು. | 10 | 11 |
| 10 | ಯಶಸ್ವಿ ಬಿಡುದಾರನ ಇತರೆ ವಿಶೇಷ ಬಾಧ್ಯಸ್ಥಿಕೆಗಳು | 10 | 11 |
| 11 | ಬೆಲೆಗಳು ಮತ್ತು ತೆರಿಗೆಗಳು. | 11 | 11 |
| 12 | ಬಿಡ್ಡುಗಳ ಅವಧಿ | 12 | 12 |
| 13 | ಎಲ್–1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದವನ್ನು ಮಾಡಿಕೊಳ್ಳುವ ಕುರಿತು | 12 | 12 |
| 14 | ಇಲಾಖೆಯು ಬಿಡ್ಡನ್ನು ಅಂಗೀಕರಿಸುವ /ತಿರಸ್ಕರಿಸುವ ಅಧಿಕಾರದ ಕುರಿತು | 13 | 13 |
| 15 | ಒಪ್ಪಂದ ಕರಾರುಪತ್ರ ಮಾಡಿಕೊಳ್ಳುವ ಕುರಿತು | 13 | 13 |
| 16 | ಕಾರ್ಯನಿರ್ವಹಣೆ. | 13 | 13 |
| 17 | ಒಪ್ಪಂದಗಳನ್ನು ಮುರಿದುಕೊಳ್ಳುವುದು | 13 | 13 |
| 18 | ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ | 14 | 14 |

| | | | |
|---|---|---|---|
| | ಕರಾರುಗಳು | | |
| 19 | ವ್ಯಾಜ್ಯಗಳ ಪರಿಹಾರ ಕುರಿತು | 14 | 14 |
| 20 | ಕೈಗಾರಿಕೆ ಇಲಾಖೆ ಪ್ರಮಾಣ ಪತ್ರ: | 15 | 15 |

**1) ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಮಾಡುವ ಏಜೆನ್ಸಿಗಳ ಅರ್ಹತೆ.**

1.1 ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಮಾಡುವ ಏಜೆನ್ಸಿಯು ಕರ್ನಾಟಕದಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರಬೇಕು.

1.2 ಪೂರೈಕೆ ಮಾಡುವ ಏಜೆನ್ಸಿಗಳು ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆ ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ ಮತ್ತು ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿ ನೊಂದಣಿಯನ್ನು ಹೊಂದಿರಬೇಕು ಹಾಗೂ ಅವುಗಳ ಪ್ರತಿಗಳನ್ನು ಲಗತ್ತಿಸಬೇಕು..

1.3 ಪೂರೈಕೆ ಮಾಡುವ ಏಜೆನ್ಸಿಗಳು ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿ ಕಳೆದ 3 ವರ್ಷಗಳಿಂದ ಸಲ್ಲಿಸಿದ ರಿಟರ್ನ್ ಪ್ರತಿಯನ್ನು ಲಗತ್ತಿಸಬೇಕು.

ಏಜೆನ್ಸಿಗಳು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು, (ಆಡಳಿತ), ಮೌಲ್ಯ ವರ್ಧಿತ ತೆರಿಗೆವಿಭಾಗ, "ಸುಮೌಲ್ಯ" ಕ್ಲಬ್ ರಸ್ತೆ, ಬೆಳಗಾವಿ ಕಟ್ಟಡದಲ್ಲಿ ಮತ್ತು ಈ ವಿಭಾಗದ ಆಧೀನ ಕಚೇರಿಗಳ ಅಭಿಲೇಖಾಲಯಗಳಿಗೆ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮಾಡಲು ಸಿದ್ಧರಿರಬೇಕು.

**2) ಅನುಭಬ:–**

2.1 ಬಿಡ್ ಸಲ್ಲಿಸುವ ಎಜೆನ್ಸಿಗಳು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪಿಸುವ ಅನುಭವನ್ನು ಹೊಂದಿರಬೇಕು.

**3) ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪನೆ:**

3.1 ಅಭಿಲೇಖಾಲಯಗಳಿಗೆ ಬೇಕಾಗುವ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪನೆಯನ್ನು ಅನುಬಂಧ–3ರಲ್ಲಿ ತೋರಿಸುವ ಕಚೇರಿಗಳಿಗೆ ಅನುಭಂಧ–2 ಮತ್ತು 4–ಎ ರಲ್ಲಿ ಕಾಣಿಸಿದ ಸ್ಪೆಸಿಫಿಕೇಶನ್ ಗಳಂತೆ ಪೂರೈಕೆ ಮಾಡುವುದು.

3.2 ಸ್ಟೀಲ ರ್‍ಯಾಕುಗಳನ್ನು ಪೂರೈಸುವ ಎಜೆನ್ಸಿಗಳು ಸ್ಟೀಲ ರ್‍ಯಾಕುಗಳನ್ನು ಸರಿಯಾಗಿ ಅಲುಗಾಡದಂತೆ ಕೂಡಿಸಬೇಕು ಹಾಗೂ ಗೋಡೆಗಳಿಗೆ ಹೊಂದಿಕೊಂಡಂತೆ ಇಡುವ ಸ್ಟೀಲ ರ್‍ಯಾಕುಗಳನ್ನು ಗೋಡೆಗಳಿಗೆ

ನಟ್ ಬೋಲ್ಟ ಜೋಡಿಸಿ ಗಟ್ಟಿಯಾಗಿ ಕೂಡಿಸಬೇಕು ಹಾಗೂ ಅವಶ್ಯಕತೆ ಇರುವಾಗ ಅಥವಾ ಕಟ್ಟಡವನ್ನು ಸ್ಥಳಾಂತರಿಸುವ ಸಂದರ್ಭ ಬಂದಲ್ಲಿ ಅವುಗಳನ್ನು ಪುನ: ಸರಳವಾಗಿ ಬೇರ್ಪಡಿಸುವಂತಿರಬೇಕು. ಹಾಗೂ ಗೋಡೆ ಬಿಟ್ಟು ಇಡುವ ಸ್ಟೀಲ ರ್‍ಯಾಕುಗಳು ಯಾವುದೇ ಕಾರಣಕ್ಕೂ ಬೀಳದಂತೆ ಸರಿಯಾಗಿ ಜೋಡಿಸಬೇಕು.

3.3 ಸ್ಥಾಪನೆಯ ಸಮಯದಲ್ಲಿ ಕಟ್ಟಡಕ್ಕೆ ಯಾವುದೇ ರೀತಿ ಧಕ್ಕೆಯಾಗದಂತೆ ಜೋಡಣೆ ಮಾಡಬೇಕು. ಕಟ್ಟಡಕ್ಕೆ ಧಕ್ಕೆಯಾದಲ್ಲಿ ಅದಕ್ಕೆ ಟೆಂಡರದಾರರೇ ಜವಾಬ್ದಾರರಾಗುತ್ತಾರೆ. ಹಾಗೂ ಸದರಿ ಹಾನಿಯನ್ನು ಟೆಂಡರದಾರರೇ ಭರಿಸಬೇಕು.

3.4 ಯಶಸ್ವಿ ಟೆಂಡರದಾರರು ತಾವು ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳನ್ನು ಪೂರೈಸುವ ಪೂರ್ವದಲ್ಲಿ ಸಂಬಂಧಿಸಿದ ಕಚೇರಿಯ ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಿ ಸ್ಥಾಪಿಸುವ ದಿನಾಂಕದ ಕುರಿತಂತೆ ಅವರಿಂದ ಪತ್ರವನ್ನು ಪಡೆದುಕೊಂಡು, ಅವರ ನಿರ್ದೇಶನದ ಪ್ರಕಾರ ಹೇಳಿದ ಸ್ಥಳದಲ್ಲಿ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳನ್ನು ಪೂರೈಕೆ ಮಾಡುವುದು ಮತ್ತು ಸ್ಥಾಪಿಸಿದ ನಂತರ ಸಂಬಂಧಪಟ್ಟ ಕಚೇರಿಯ ಮುಖ್ಯಾಧಿಕಾರಿಯಿಂದ ತೃಪ್ತಿದಾಯಕ ಪ್ರಮಾಣಪತ್ರವನ್ನು ಪಡೆದುಕೊಂಡು ಹಾಜರ ಪಡಿಸುವುದು.

**4) ಮಾದರಿಯನ್ನು (ಸ್ಯಾಂಪಲ್) ಹಾಜರ ಪಡಿಸುವುದು**

4.1 ಟೆಂಡರ ಅರ್ಜಿದಾರರು ತಾವು ಟೆಂಡರಿನಲ್ಲಿ ಸಲ್ಲಿಸಿದಂತೆ ಟೆಂಡರ ಪ್ರಕಾರ ಸ್ಯಾಂಪಲ್‌ನ್ನು ಟೆಕ್ನಿಕಲ್/ಅರ್ಹತಾಪೂರ್ವ ಬಿಡ್ ತೆರೆಯುವ ಸಮಯದಲ್ಲಿ ಮಾದರಿಯನ್ನು(ಸ್ಯಾಂಪಲ್) ತಪ್ಪದೇ ಹಾಜರ ಪಡಿಸುವುದು. ಹಾಜರ ಮಾಡದವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

**5)ಗುಣಮಟ್ಟ:–**

5.1 ಯಶಸ್ವಿ ಟೆಂಡರದಾರರು ತಾವು ಪೂರೈಸುವ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆಯು ಅನುಬಂಧ 2 ಮತ್ತು 4–ಎ ರಲ್ಲಿ ಸೂಚಿಸಿರುವ ಸ್ಪೆಸಿಫಿಕೇಶನ್‌ಗಳಂತೆ ಇರಬೇಕು.

5.2 ಒಂದು ವೇಳೆ ನಿಗದಿಪಡಿಸಿದ ಸ್ಪೆಸಿಫಿಕೇಶನ್‌ಗಳಂತೆ ಪೂರೈಸಲು ವಿಫಲರಾದಲ್ಲಿ ಸದರಿ ಟೆಂಡರ ಪ್ರಕ್ರಿಯೆಗೆ ತಗುಲಿದ ವೆಚ್ಚದೊಂದಿಗೆ ನೀವು ಸಲ್ಲಿಸಿದ ಟೆಂಡರ ಮೊತ್ತದ ಮೇಲೆ ತಿಂಗಳಿಗೆ ಶೇ. 6ರಂತೆ ಮಾಸಿಕ ಸರಳ ಬಡ್ಡಿಯನ್ನು ಆಕರಿಸಲಾಗುವುದು.

**6) ಬಿಡ್ಡಗಳ ಸಲ್ಲಿಕೆ.**

6.1 ಬಿಡ್ಡುದಾರರು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ತಿಳಿಸಿರುವಂತೆ ತೃಪ್ತಿದಾಯಕವಾಗಿ ನಿಗದಿತ ಅನುಬಂಧ-1,2,3, ಮತ್ತು 4-ಎ ಹಾಗೂ 4-ಬಿರಲ್ಲಿ ಕಾಣಿಸಿರುವಂತೆ ಎಲ್ಲ ಅಂಶಗಳನ್ನು ಭರಣಾ ಮಾಡಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಡಿ.ವಿ.ಓ. ಬೆಳಗಾವಿ ಇವರ ವಿಳಾಸಕ್ಕೆ ಸಲ್ಲಿಸುವುದು.

ಎ) ಹಾಗೂ ಮೊದಲನೆಯ ಲಕೋಟೆಯಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಲಕೋಟೆಯ ಮೇಲೆ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆಯ ಬಗ್ಗೆ ಟೆಂಡರು (ಟೆಕ್ನಿಕಲ್ /ಅರ್ಹತಾಪೂರ್ವ ಬಿಡ್)" ಎಂದು ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ-1,3, ಮತ್ತು 4-ಎ ಮತ್ತು 4-ಬಿಯನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

ಬಿ) ಅದರಂತೆ ಎರಡನೆಯ ಲಕೋಟೆಯಾದ ಫೈನಾನ್ಸಿಯಲ್ ಬಿಡ್ ಲಕೋಟೆಯಮೇಲೆ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆಯ ಬಗ್ಗೆ ಟೆಂಡರು (ಫೈನಾನ್ಸಿಯಲ್ ಬಿಡ್)" ಎಂದು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ2ನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

6.2 ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳನ್ನು ಪೂರೈಸುವ ಏಜೆನ್ಸಿಗಳು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡೂ ಬಿಡ್‌ಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

6.3 ಏಜೆನ್ಸಿಗಳು ಟೆಂಡರಿನ ಮಾದರಿ ನಮೂನೆಗಳನ್ನು (Request for Proposal) ಅಂತರಜಾಲದ ಮೂಲಕ ಡೌನಲೋಡ ಮಾಡಿಕೊಂಡು ಎಲ್ಲ ನಮೂನೆಗಳನ್ನು ಪಡೆದು ಸದರಿ ಟೆಂಡರಿನ ಮೊತ್ತ ರೂ. 500-00 ಹಾಗೂ ತೆರಿಗೆ ರೂ.68-00 (ಶೇ. 13.5ರಂತೆ) ಒಟ್ಟು ರೂ. 568-00ಗಳನ್ನು ಭಾರತೀಯ ಸ್ಟೇಟ ಬ್ಯಾಂಕಿನಲ್ಲಿ ಚಲನ ಮೂಲಕ ಭರ್ತಿ ಮಾಡಿ (ಲೆಕ್ಕ ಶೀರ್ಷಿಕೆ 0040-00-102-0-06) ಚಲನಿನ ಮೂಲ ಪ್ರತಿಯನ್ನು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನೊಂದಿಗೆ ಲಗತ್ತಿಸುವುದು. ಹಾಗೂ ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

6.4. ಸೀಲು ಮಾಡಿದ ಲಕೋಟೆಗಳಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಹಾಗೂ ಫೈನಾನ್ಸಿಯಲ್ ಬಿಡ್ ಗಳನ್ನು ದೊಡ್ಡದಾದ ಇನ್ನೊಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಆಡಳಿತ, ಮೌ.ವ.ತೆ. ಬೆಳಗಾವಿ ವಿಭಾಗ. 1ನೇ ಅಂತಸ್ತು, **"ಸುಮೌಲ್ಯ ಸೌಧ"**, ಕ್ಲಬ್ ರಸ್ತೆ, ಬೆಳಗಾವಿ, ಇಲ್ಲಿಗೆ ದಿನಾಂಕ**: 07/02/2011**ರಂದು ಸಂಜೆ 4.00 ರೊಳಗಾಗಿ ಸಲ್ಲಿಸುವುದು. ಹಾಗೂ ಸದರಿ ಟೆಂಡರುಗಳನ್ನು ದಿನಾಂಕ:**08/02/2011**ರಂದು ಬೆಳಿಗ್ಗೆ 11–00 ಗಂಟೆಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕೊಠಡಿಯೊಳಗೆ ತೆರೆಯಲಾಗುವುದು.

6.5 ಯಾವುದೇ ಬಿಡ್‌ಗಳನ್ನು ನಿಗದಿ ಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸ್ವೀಕರಿಸಿರದಿದ್ದರೆ ಅಂತಹ ಬಿಡ್ಡುಗಳನ್ನು ತಿರಸ್ಕರಿಸಲಾಗುವುದು. ಒಂದು ವೇಳೆ ಬಿಡ್ಡುಗಳನ್ನು ತೆರೆಯುವಂತಹ ದಿನಾಂಕವು ಸರ್ಕಾರಿ ರಜೆ ದಿನವಾದ ಪಕ್ಷದಲ್ಲಿ ಮರುದಿನವೇ ಅಂದರೆ ಕಚೇರಿಯ ಕಾರ್ಯನಿರ್ವಹಿಸುವ ದಿನದಂದು ಈ ಹಿಂದೆ ನಿಗದಿಪಡಿಸಿದ ಸಮಯಕ್ಕೆ ತೆರೆಯಲಾಗುವುದು.

6.6 ಬಿಡ್ಡುಗಳನ್ನು ಸಲ್ಲಿಸುವುದಕ್ಕಾಗಿ ಬಿಡ್ಡುದಾರರು ವ್ಯಯಿಸಿದಂತಹ ವೆಚ್ಚಕ್ಕೆ ಈ ಇಲಾಖೆಯು ಯಾವುದೇ ರೀತಿಯಿಂದ, ಯಾವುದೇ ಕಾರಣಕ್ಕೂ ಜವಾಬ್ದಾರರಾಗುವುದಿಲ್ಲ.

6.7 ಇ.ಎಮ್.ಡಿ. ಮೊತ್ತ ರೂ. 50,000/–ಗಳನ್ನು ಡಿ.ಡಿ. ರೂಪದಲ್ಲಿ ಅರ್ಹತಾಪೂರ್ವ ಬಿಡ್ ನೊಂದಿಗೆ ಲಗತ್ತಿಸುವುದು.

**7) ಬಿಡ್ಡುಗಳ ತೆರೆಯುವಪ್ರಕ್ರಿಯೆ.**

7.1 ವಾಣಿಜ್ಯ ತೆರಿಗೆ ಇಲಾಖೆಯು ಎರಡು ಹಂತದಲ್ಲಿ ಬಿಡ್ ತೆರೆಯುವ ಪ್ರಕ್ರಿಯೆಯನ್ನು ನಡೆಸುವುದು. ಅವುಗಳು ಈ ಕೆಳಗಿನಂತಿವೆ:

1) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.

2) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಟೆಂಡರದಾರರ ಫೈನಾನ್ಸಿಯಲ್ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.

7.2 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ಪ್ಯಾರಾ 6.4 ರಲ್ಲಿ ತಿಳಿಸಿದ ಸ್ಥಳ ಹಾಗೂ ಸಮಯದಲ್ಲಿ ಹಾಜರಿರುವ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು ಮತ್ತು ಅವರ ಹಾಜರಾತಿಯನ್ನು ಪಡೆಯಲಾಗುವುದು, ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ತೆರೆದ ನಡಾವಳಿಯ ಮೇಲೆ ಹಾಜರಾದ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಹಿಯನ್ನು ಪಡೆಯಲಾಗುವುದು ಸದರಿ ಪ್ರಕ್ರಿಯೆಯಲ್ಲಿ ಈ ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳನ್ನು ಪೂರೈಸದ ಟೆಂಡರದಾರರನ್ನು ಟೆಂಡರ ಪ್ರಕ್ರಿಯೆಯಿಂದ ಕಡಿತಗೊಳಿಸಲಾಗುವುದು. ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ

ಫೈನಾನ್ಸಿಯಲ್ ಬಿಡ್ ಲಕೋಟೆಯನ್ನು ನಂತರ ತೆರೆಯಲಾಗುವುದು ಹಾಗೂ ಎಲ್1 ಬಿಡ್ಡದಾರರನ್ನು ಪ್ಯಾರಾ –13ರಲ್ಲಿ ತಿಳಸಿರುವಂತೆ ಪರಿಗಣಿಸಲಾಗುವುದು.

7.3 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ಗಳನ್ನು ಪರಿಶೀಲಿಸಿದ ನಂತರ, ಸದರಿ ಬಿಡ್‌ನಲ್ಲಿ ಪ್ರಸ್ತಾವನಾ ವಿನಂತಿಯಲ್ಲಿಯ ಶರತ್ತುಗಳನ್ನು ಪೂರೈಸಿದ (ಅರ್ಹ ಬಿಡ್‌ರಗಳ) ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ತೆರೆಯಲಾಗುವದು ಫೈನಾನ್ಸಿಯಲ್ ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ಸಮಯವನ್ನು ಟೆಕ್ನಿಕಲ್ ಬಿಡ್‌ನ್ನು ತೆರೆಯುವ ಸಮಯದಲ್ಲಿ ಹಾಜರಿರುವ ಬಿಡ್‌ರಗಳಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಮೌಖಿಕವಾಗಿ ತಿಳಿಸಲಾಗುವುದು.

8) **ಬಿಡ್ಡುಗಳಲ್ಲಿಯ ಸಹಿ ಕುರಿತು**.

8.1 ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಬೆರಳಚ್ಚು ಮಾಡಿಯೇ ಸಲ್ಲಿಸತಕ್ಕದ್ದು (ಅಥವಾ ಕಂಪ್ಯೂಟರ ಪ್ರಿಂಟ ಮೂಲಕ). ಈ ಬಿಡ್‌ಗಳ ಮೇಲೆ ಟೆಂಡರರದಾರ ಅಥವಾ ಟೆಂಡರರದಾರರು ಸಮ್ಮತಿಸಿದ ಪ್ರತಿನಿಧಿಗಳು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳಿಗೆ ಬದ್ಧರಾಗಬೇಕಾದರೆ ಪ್ರಸ್ತಾವನೆಯ ಎಲ್ಲ ಪುಟಗಳ ಮೇಲೆ ಸಹಿ ಮಾಡಿರಬೇಕು.

9) ಪಸ್ತಾನೆಯಿಲ್ಲಿ ಕರಾರುಗಳನ್ನು ಷರತ್ತುಗಳನ್ನು ತಿದ್ದುಪಡಿ/ರದ್ದು ಪಡಿಸುವ ಕುರಿತು.

9.1 ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳನ್ನು ಯಾವುದೇ ಸಮಯದಲ್ಲಿ ಬದಲಾವಣೆ/ಮಾರ್ಪಾಡು ಮಾಡುವ ಅಥವಾ ರದ್ದು ಪಡಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ. ಒಂದು ವೇಳೆ ಪ್ರಸ್ತಾವನೆಯನ್ನು ಸ್ವೀಕರಿಸಿ ತೆರೆಯುವ ದಿನಾಂಕದ ಬದಲಾವಣೆ ಮಾಡುವ ಪರಿಸ್ಥಿತಿ ಬಂದಲ್ಲಿ ಅಂತಹ ವಿಷಯವನ್ನು ಈ ಕಚೇರಿಯ ನೋಟೀಸ ಬೋರ್ಡಿನಲ್ಲಿ ಬದಲಾವಣೆ ಮಾಡಿದ ದಿನಾಂಕವನ್ನು ಪ್ರಕಟಿಸಲಾಗುವುದು.

**10) ಯಶಸ್ವಿ ಬಿಡುದಾರನ ಇತರೆ ವಿಶೇಷ ಬಾಧ್ಯಸ್ಥಿಕೆಗಳು:**

ವಾಣಿಜ್ಯ ತೆರಿಗೆ ಇಲಾಖೆಯು ಕಾಲ ಕಾಲಕ್ಕೆ ಅವಶ್ಯವಿರುವ ಕೆಲವು ಸಾಮಾನ್ಯ ಶರತ್ತುಗಳನ್ನು ಸೇರಿಸುವ ಕಡಿತಗೊಳಿಸುವ, ತಿದ್ದುಪಡಿ/ಮಾರ್ಪಾಡು ಮಾಡುವ ಹಕ್ಕನ್ನು ಈ ಮೂಲಕ ಕಾಯ್ದಿರಿಸಿರುತ್ತದೆ.

10.1 ವಾಣಿಜ್ಯ ತೆರಿಗೆ ಇಲಾಖೆಯ ನಿರೀಕ್ಷೆಯಂತೆ ಯಶಸ್ವಿ ಬಿಡ್ಡುದಾರನು ವಿಧಿಸಿರುವ ಎಲ್ಲ ಕರಾರುಗಳನ್ನು, ತಾವು ನಿರ್ವಹಿಬೇಕಾದ ಚಟುವಟುಕೆಗಳನ್ನು ಕಾಳಜಿಯಿಂದ ಚಾಚೂ ತಪ್ಪದೆ ಜವಾಬ್ದಾರಿಯುತವಾಗಿ ನಿರ್ವಹಿಸುವುದು.

10.2 ವಾಣಿಜ್ಯ ತೆರಿಗೆ ಇಲಾಖೆಯು ವಿಧಿಸಿರುವ ಶರತ್ತಿನಂತೆ ತಮ್ಮ ಅಧಿಕಾರವಾಪ್ತಿಯಲ್ಲಿ, ಇಲಾಖಾ ಸಿಬ್ಬಂದಿಗಳೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿ ಅವರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವುದು.

10.3 ಯಶಸ್ವಿ ಬಿಡ್‌ದಾರನು ತಾನು ಒದಗಿಸಿದ ಸಿಬ್ಬಂದಿಯ ಅಥವಾ ತನ್ನ ಕಾರ್ಯವನ್ನು ನಿರ್ವಹಿಸಲು ನೀಡಿದ ಇತರೆ ವ್ಯಕ್ತಿಯು (sub contractor) ಕಾನೂನು ಬಾಹಿರ ಕಾರ್ಯಗಳನ್ನು ನಿರ್ವಹಿಸುವುದು ಕಂಡು ಬಂದಲ್ಲಿ ಅದರಿಂದುಂಟಾಗುವ ನಷ್ಟಗಳಿಗೆ, ಯಶಸ್ವಿ ಬಿಡ್‌ದಾರನೇ ನೇರ ಹೊಣೆಗಾರನಾಗುತ್ತಾನೆ.

10.4 ಈ ಇಲಾಖೆಯಿಂದ ನೀಡುವ ನೋಟೀಸುಗಳನ್ನು ಸ್ವೀಕರಿಸುವ, ಅವುಗಳಿಗೆ ಉತ್ತರಿಸುವ ಕಾರ್ಯಗಳಿಗೆ, ಮತ್ತು ಟೆಂಡರದಾರನು ಪೂರೈಸುವ ಮತ್ತು ಸ್ಥಾಪಿಸುವ ಕಾರ್ಯ ನಿರ್ವಹಣೆಗಳನ್ನು ವೀಕ್ಷಿಸಲು ಮತ್ತು ಒಪ್ಪಂದದ ಕರಾರುಗಳ ಸುಗಮ ನಿರ್ವಹಣೆಗೆ ಒಬ್ಬ ನುರಿತ ಅರ್ಹತೆಯುಳ್ಳ ತಾಂತ್ರಿಕ ನೈಪುಣ್ಯತೆಯನ್ನು ಹೊಂದಿದ ಪ್ರತಿನಿಧಿಯನ್ನು ನಿಯೋಜಿಸತಕ್ಕದ್ದು. ಹಾಗೂ ನಿಯೋಜಿತ ಪ್ರತಿನಿಧಿಯನ್ನು ಬದಲಾಯಿಸುವ ಪೂರ್ವದಲ್ಲಿ ಕಚೇರಿಯ ಪೂರ್ವ ಅನುಮತಿಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಯಶಸ್ವಿ ಬಿಡ್‌ದಾರನು ಒಪ್ಪಂದವು ಸಂಪೂರ್ಣವಾಗಿ ಯಶಸ್ವಿಯಾಗಲು ನೇರ/ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತಾನೆ.

**11) ಬೆಲೆಗಳು ಮತ್ತು ತೆರಿಗೆಗಳು.**

11.1 ಗುತ್ತಿಗೆದಾರರು ನಮೂದಿಸಿರುವ ಬೆಲೆಗಳು ಎಲ್ಲ ತೆರಿಗೆಗಳಾದ ಅಂದರೆ, ಉದಾ: ವೃತ್ತಿ ತೆರಿಗೆ, ಆದಾಯ ತೆರಿಗೆ, ವಿಮಾ ಮೊಬಲಗು, ತಾಂತ್ರಿಕ ಸೇವಾ ಶುಲ್ಕ, ಸಾರಿಗೆ ಶುಲ್ಕ ಇತ್ಯಾದಿಗಳನ್ನು ಒಳಗೊಂಡಿರಬೇಕು ಹಾಗೂ ಸ್ಥಿರ ಮೊಬಲಗು ಆಗಿರಬೇಕು.

11.2 ಅಲ್ಲದೇ ತಾವು ನಮೂದಿಸಿದ ಬೆಲೆಗಳು ಗುತ್ತಿಗೆ ಅವಧಿ ಮುಗಿಯುವವರೆಗೆ ಸ್ಥಿರವಾಗಿರತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಬದಲಾವಣೆಗೆ ಒಳಪಡಕೂಡದು. ಹಾಗೂ ತಾವು ನಮೂದಿಸಿದ ಬೆಲೆಗಳನ್ನು ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಯಾವುದೇ ರೀತಿಯಲ್ಲಿ ಕಾಣಿಸಬಾರದು. ಒಂದು ವೇಳೆ ಕಾಣಿಸಿದಲ್ಲಿ ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

**12) ಬಿಡ್ಡುಗಳ ಅವಧಿ**

12.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎರಡು ಬಿಡ್‌ಗಳ ಅವಧಿಯು ಈ ಕಚೇರಿಯಿಂದ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕದಿಂದ 6 ತಿಂಗಳು ಅವಧಿಯ ವರೆಗೆ ಮಾತ್ರ ಹೊಂದಿರುತ್ತದೆ.

**13) ಎಲ್–1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದವನ್ನು ಮಾಡಿಕೊಳ್ಳುವ ಕುರಿತು.**

13.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡು ಬಿಡ್‌ಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಹಾಜರಿದ್ದ ಬಿಡ್ಡುದಾರರ ಸಮ್ಮುಖದಲ್ಲಿ ಟೆಂಡರುಗಳನ್ನು ತೆರೆದು ಅತ್ಯಂತ ಕಡಿಮೆ ಮೊತ್ತ ಸೂಚಿಸಿರುವ ಬಿಡ್ಡುದಾರರನ್ನು ಇಲಾಖೆಯು ಗುರುತಿಸಿ ಸದರಿ ಬಿಡ್ಡುದಾರರನ್ನು ಎಲ್–1 ಬಿಡ್ಡುದಾರರೆಂದು ಘೋಷಿಸಲಾಗುವುದು. ಆದ್ದರಿಂದ ಬಿಡ್ಡುದಾರರು ತಾವು ನಮೂದಿಸುವ ಬೆಲೆಗಳು ತಮ್ಮ ಸ್ವಂತ ಇಚ್ಛೆಯಿಂದ ತುಲನಾತ್ಮಕ ದರಗಳನ್ನು ನಮೂದಿಸಬೇಕಲ್ಲದೇ ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಾಗಲೀ, ವ್ಯವಹರಿಸುವುದಾಗಲೀ, ಮುರಿಸುವುದಾಗಲಿ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಟೆಕ್ನಿಕಲ್/ ಅರ್ಹತಾ ಪೂರ್ವ ಬಿಡ್ ಫೈನಾನ್ಸಿಯಲ್ ಬಿಡ್‌ನಲ್ಲಿ, ತಿಳಿಸಿರುವಂತೆ ಯಾವುದೇ ಕಾರಣಕ್ಕೆ ಒಳಾಂಶಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಇಲಾಖೆಯು ಎಲ್–1 ಬಿಡ್ಡುದಾರರೆಂದು ಘೋಷಿಸಿರುವುದನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ. ಹಾಗೂ ತದನಂತರ ಅತ್ಯಂತ ಕಡಿಮೆ ಮೊತ್ತವನ್ನು ನಮೂದಿಸಿರುವ ಬಿಡ್ಡುದಾರರನ್ನು ಗುರುತಿಸಿ ಎಲ್–2 ಬಿಡ್ಡುದಾರರೆಂದು ಘೋಷಿಸಲಾಗುವುದು. ಹಾಗೂ ಒಂದುವೇಳೆ ಏತನ್ಮಧ್ಯೆ ಕೆಲಸದ ಆದೇಶ ಪಡೆದರೂ ಸಹಿತ ಅದನ್ನು ರದ್ದು ಪಡಿಸುವ ಹಕ್ಕು ಇಲಾಖೆಯು ಹೊಂದಿರುತ್ತದೆ. ಹಾಗೂ ಅಂತಹ ಬಿಡ್ಡುದಾರರನ್ನು ಕಪ್ಪು ಪಟ್ಟಿಗೆ ಸೇರಿಸುವುದರೊಂದಿಗೆ ಇಲಾಖೆಯು ಮುಂದೆ ಹೊರಡಿಸಬಹುದಾದ ಯಾವುದೇ ಟೆಂಡರ ಪ್ರಕ್ರಿಯೆಯಲ್ಲಿ ಎರಡು ವರ್ಷಗಳ ಅವಧಿಗೆ ಅನರ್ಹತೆಯನ್ನು ಹೊಂದಿರುತ್ತಾರೆ.

13.2 ಫೈನಾನ್ಸಿಯಲ್ ಬಿಡ್ ಪ್ರಕ್ರಿಯೆಯಲ್ಲಿ ಒಬ್ಬರಿಗಿಂತ ಹೆಚ್ಚು ಎಜೆನ್ಸಿಗಳು ಒಂದೇ ತೆರನಾದ ದರವನ್ನು ನಮೂದಿಸಿದ್ದು ಕಂಡುಬಂದಲ್ಲಿ:

ಎ) ಒಂದೆ ತೆರನಾದ ಟೆಂಡರ ದರವನ್ನು ನಮೂದಿಸಿದ ಎಜೆನ್ಸಿಗಳು ಪರಸ್ಪರ ಲಿಖಿತ ಒಪ್ಪಂದದ ಮೂಲಕ ಸರಕು ಮತ್ತು ಸೇವೆಯನ್ನು ಸಮನಾಗಿ ಹಂಚಿಕೊಂಡು ಪೂರೈಸುವುದು.

ಬಿ) ಅಥವಾ ಒಂದೇ ತೆರನಾದ ಟೆಂಡರ ದರವನ್ನು ನಮೂದಿಸಿದ ಏಜೆನ್ಸಿಗಳ ಸಮ್ಮುಖದಲ್ಲಿ ಬಿಲ್ಲೆಯನ್ನು ತೂರಿ (TOSS ಮೂಲಕ)ವಿಜೇತ ಎಜೆನ್ಸಿಗೆ ಟೆಂಡರ ಹಂಚಿಕೆ ಮಾಡಲಾಗುವುದು.

ಸಿ) ಮೇಲ್ಕಾಣಿಸಿದ 13.2 (ಎ) ಮತ್ತು (ಬಿ) ಪ್ರಕ್ರಿಯೆಗಳಿಗೆ ಒಪ್ಪದೇ ಹೋದ ಪಕ್ಷದಲ್ಲಿ ಇಲಾಖೆಯು ಸ್ವಂತ ನಿರ್ಧಾರವನ್ನು ಕೈಗೊಳ್ಳುವ ಹಕ್ಕನ್ನು ಹೊಂದಿರುತ್ತದೆ.

14) **ಇಲಾಖೆಯು ಬಿಡ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಅಧಿಕಾರದ ಕುರಿತು.**

14.1 ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳನ್ನು ಹಾಗೂ ಟೆಂಡರ ಪ್ರಕ್ರಿಯೆ ಪ್ರಾರಂಭದ ಪೂರ್ವದಲ್ಲಿ ಅಥವಾ ನಂತರದಲ್ಲಾಗಲಿ ಟೆಂಡರ ಬಿಡ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ.

**15) ಒಪಂದ ಕರಾರು ಮಾಡಿಕೊಳ್ಳುವ ಕುರಿತು.**

15.1 ಯಶಸ್ವಿ ಬಿಡ್ಡುದಾರರು ತಮಗೆ ಲಿಖಿತ ಆದೇಶ ತಲುಪಿದ ದಿನಾಂಕದಿಂದ 10 ದಿನಗಳ ಒಳಗಾಗಿ ಈ ಕಚೇರಿಗೆ ಹಾಜರಾಗಿ ಕರಾರು ಒಪ್ಪಂದ ಪತ್ರವನ್ನು ಮಾಡಿಕೊಳ್ಳತಕ್ಕದ್ದು.

**16) ಕಾರ್ಯನಿರ್ವಹಣೆ.**

16.1 ಸದರ ಒಪ್ಪಂದದ ಅವಧಿಯಲ್ಲಿ ಯಶಸ್ವಿ ಬಿಡ್ಡುದಾರರು ಭಾಗಶ:ವಾಗಲಿ ಅಥವಾ ತಮ್ಮ ಪರವಾಗಿ ಇನ್ನಿತರಿಗೆ ಸದರಿ ಕಾರ್ಯವನ್ನು ವಹಿಸಿಕೊಡುವುದಾಗಲಿ ಮಾಡಬಾರದು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು.

16.2 ಯಶಸ್ವಿ ಬಿಡ್ಡುದಾರರು ತಮಗೆ ಕಾರ್ಯಾದೇಶ ನೀಡಿದ ಮೇಲೆ ದಿನಾಂಕ: 10**–03–2011** ರೊಳಗಾಗಿ ಕಚೇರಿಯ ಅಲ್ಯೂಮಿನಿಯಂ ಪಾರ್ಟೀಶನ ಹಾಗೂ ಪಿಠೋಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಕಾರ್ಯವನ್ನು ಮುಕ್ತಾಯಗೊಳಿಸಲು ಬದ್ದರಾಗಿರಬೇಕು.

**17) ಒಪ್ಪಂದಗಳನ್ನು ಮುರಿದುಕೊಳ್ಳುವುದು.**

17.1 ಯಶಸ್ವಿ ಬಿಡ್ಡದಾರನು ಒಪ್ಪಂದದ ಯಾವುದೇ ಕರಾರುಗಳನ್ನು ಉಲ್ಲಂಘಿಸಿದಲ್ಲಿ/ಅಥವಾ ದಿವಾಳಿಯಾದಲ್ಲಿ ಇಲಾಖೆಯು ಅವರಿಗೆ ಸೂಚನಾ ಪತ್ರವನ್ನು ನೀಡುವುದರೊಂದಿಗೆ ಒಪ್ಪಂದವನ್ನು ಸಂಪೂರ್ಣವಾಗಿಯಾಗಲೀ ಅಥವಾ ಭಾಗಶ:ವಾಗಲಿ ಮುರಿದುಕೊಳ್ಳಬಹುದಾಗಿರುತ್ತದೆ. ಹಾಗೂ ಅವನು ನೀಡಿದಂತಹ "ಇ,ಎಮ್.ಡಿ" ಮೊತ್ತವನ್ನು ಇಲಾಖೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಇಲಾಖೆಯು ಮುಂದಿನ ಅವಧಿಗೆ ಬೇರೆ ಇನ್ನೊಬ್ಬ ಗುತ್ತಿಗೆದಾರನಿಂದ ಸೇವೆಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತದೆ.

**18) ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ ಕರಾರುಗಳು.**

18.1 ಯಶಸ್ವಿ ಬಿಡ್ಡುದಾರನು ಸಂಬಂಧಿಸಿದ ಕಚೇರಿಗಳಲ್ಲಿ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮಾಡಿದ ನಂತರ ಹಾಗೂ ಒಟ್ಟಾರೆ ಕೆಲಸ ನಿರ್ವಹಿಸಿದ ಬಗ್ಗೆ ಗುತ್ತಿಗೆ ಮೊತ್ತವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು, ಮತ್ತು ಆಯಾ ಕಚೇರಿಯ ಮುಖ್ಯಾಧಿಕಾರಿಗಳಿಂದ ತೃಪ್ತಿದಾಯಕ ಪ್ರಮಾಣಪತ್ರವನ್ನು ಪಡೆದುಕೊಂಡು ಒಂದು ವಾರದೊಳಗಾಗಿ ತಮ್ಮ ಬಿಲ್ಲಿನೊಂದಿಗೆ ಪಾವತಿಗಾಗಿ ಈ ಕಚೇರಿಗೆ ಬಿಲ್ಲನ್ನು ಸಲ್ಲಿಸತಕ್ಕದ್ದು.

18.2 ಯಶಸ್ವಿ ಬಿಡ್ಡುದಾರನು ಬಿಲ್ಲು ಸಲ್ಲಿಸಿದ ಹದಿನೈದುದಿನದೊಳಗಾಗಿ ಗುತ್ತಿಗೆ ಮೊತ್ತವನ್ನು ಪಾವತಿ ಮಾಡಲಾಗುವುದು.

18.3 ಪ್ರತಿ ಕಛೇರಿಗೆ ಪೂರೈಸಿ ಅಳವಡಿಸಬೇಕಾದ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಸಂಖ್ಯೆಯಲ್ಲಿ ವ್ಯತ್ಯಾಸ (ಹೆಚ್ಚು / ಕಡಿಮೆ) ಉಂಟಾಗುವ ಸಾಧ್ಯತೆ ಇದೆ.

**19) ವ್ಯಾಜ್ಯಗಳ ಪರಿಹಾರ ಕುರಿತು.**

19.1 ಒಂದುವೇಳೆ ಇಲಾಖೆ ಹಾಗೂ ಯಶಸ್ವಿ ಬಿಡ್ಡುದಾರರ ಮಧ್ಯ ಗುತ್ತಿಗೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಕರಾರು ಒಪ್ಪಂದ ಪತ್ರದ ಒಳಾಂಶಗಳಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು/ವಿವಾದಗಳು ಉದ್ಭವಿಸಿದಲ್ಲಿ ಅವುಗಳನ್ನು ಯಾವುದೇ ದುರದ್ದೇಶವಿಲ್ಲದೇ ಒಟ್ಟಾಭಿಪ್ರಾಯದಲ್ಲಿ ಇಲಾಖೆಯು ನಿಗದಿಪಡಿಸಿದ ಚೌಕಟ್ಟಿನೊಳಗೆ ಮಾತುಕತೆ ಮೂಲಕವಾಗಲೀ ಅಥವಾ ಇನ್ನಾವುದೇ ಯೋಗ್ಯವೆನಿಸಿದ ಪರಿಹಾರದ ಮೂಲಕವಾಗಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಆದಾಗ್ಯೂ ಸಹಿತ ಸದರ ವ್ಯಾಜ್ಯಗಳು ಪರಿಹರಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಗುತ್ತಿಗೆದಾರರ ಪರವಾಗಿ ಹಾಗೂ ಇಲಾಖೆಯ ಪರವಾಗಿ ಮಧ್ಯಸ್ಥ ಪ್ರಾಧಿಕಾರವನ್ನು ರಚಿಸಿ, ಅದರಲ್ಲಿ ಗುತ್ತಿಗೆದಾರರ ಪರವಾಗಿ ಒಬ್ಬ ಮಧ್ಯಸ್ಥಗಾರನನ್ನು ಹಾಗೂ ಇಲಾಖೆಯ ಪರವಾಗಿ ಒಬ್ಬ ಮಧ್ಯಸ್ಥಗಾರನನ್ನು ಸೂಚಿಸಲಾಗುವುದು ಹಾಗೂ ಮೇಲ್ಕಾಣಿಸಿದ ಇಬ್ಬರೂ ಮಧ್ಯಸ್ಥರು ಸೇರಿ, ಇನ್ನೊಬ್ಬ ಮೂರನೇ ಮಧ್ಯಸ್ಥಗಾರರನ್ನು ಸೂಚಿಸಿ ಮಧ್ಯಸ್ಥ ಪ್ರಾಧಿಕಾರವು ನೀಡುವ ಮಧ್ಯಸ್ಥ ಐತೀರ್ಪಿಗೆ ಒಳಪಟ್ಟು ಮಧ್ಯಸ್ಥ ಒಪ್ಪಂದವನ್ನು ಮಾಡಿಕೊಂಡು ವ್ಯಾಜ್ಯಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು. ಇಷ್ಟೆಲ್ಲ ಪ್ರಯತ್ನಿಸಲಾಗಿ ವ್ಯಾಜ್ಯಗಳನ್ನು ಪರಿಹರಿಸಲು ಸಾಧ್ಯವಾಗದೇ ಇದ್ದಲ್ಲಿ ಮಧ್ಯಸ್ಥಿಕೆ ಅಧಿನಿಯಮ–1996ರ ಪ್ರಕಾರ ಮಧ್ಯಸ್ಥ ಐತೀರ್ಪಿನ ಪ್ರಕಾರ ಮಧ್ಯಸ್ಥ ಪ್ರಾಧಿಕಾರವು ಸೂಚಿಸಿದಂತೆ ಮಧ್ಯಸ್ಥಿಕೆ ಖಂಡಗಳನ್ವಯ ಯಾವುದೇ ಸಮಯದಲ್ಲಿ, ಯಾವುದೇ ರೂಪದಲ್ಲಿ ಅವರು ಸೂಚಿಸುವ ಖಂಡಗಳನ್ವಯ ತಗುಲಿದ ಅನುಷಂಗಿಕ/ಪ್ರಾಸಂಗಿಕ ವೆಚ್ಚಗಳನ್ನು ಸಮನಾಗಿ ಭರಿಸುವುದರೊಂದಿಗೆ ವ್ಯಾಜ್ಯಗಳನ್ನು/ವಿವಾದಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು.

ಆದಾಗ್ಯೂ ಸಹಿತ ವಿವಾದವು/ವ್ಯಾಜ್ಯಗಳು ಪರಿಹಾರವಾಗದೇ ಹಾಗೇ ಉಳಿದುಕೊಂಡಲ್ಲಿ ತತ್ಪರಿಣಾಮವಾದ ಪರಿಹಾರವನ್ನು ಪಡೆದುಕೊಳ್ಳಲು ಅಂತಿಮವಾಗಿ ಸಿವಿಲ್ ನ್ಯಾಯಾಲಯ, ಬೆಳಗಾವಿ, ಇವರು ನೀಡುವ ಆದೇಶಕ್ಕೆ ಒಳಪಟ್ಟು ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವುದಾಗಿರುತ್ತದೆ.

**20) ಕೈಗಾರಿಕೆ ಇಲಾಖೆಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.**

20.1 ಯಶಸ್ವಿ ಬಿಡ್ಡುದಾರನು ಜಿಲ್ಲಾ ಕೈಗಾರಿಕೆ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿಯನ್ನು ಹೊಂದಿರಬೇಕು ಮತ್ತು ಸರಕುಗಳನ್ನು ಇಲಾಖೆಗೆ ಸರಬರಾಜು ಮಾಡುವ ಪೂರ್ವದಲ್ಲಿ ಎಲ್ಲಾ ಸಾಮಗ್ರಿಗಳನ್ನು ಕೈಗಾರಿಕಾ ಇಲಾಖೆಯ ಉಪ ನಿರ್ದೇಶಕರ ತಪಾಸಣೆಗೆ ಒಳಪಡಿಸುವುದು. ತದನಂತರ ಅವರು ಸರಕುಗಳನ್ನು ಪರಿಶೀಲಿಸಿ, ಅವರಿಂದ ಉತ್ತಮ ಗುಣಮಟ್ಟದ ಖಾತರಿ ಬಗ್ಗೆ ಪ್ರಮಾಣ ಪತ್ರವನ್ನು ಪಡೆದುಕೊಂಡು ಈ ಕಚೇರಿಗೆ ಸಲ್ಲಿಸಲು ಬದ್ಧರಾಗಿರಬೇಕು.

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ)**
**ಮೌಲ್ಯ ವರ್ಧಿತ ತೆರಿಗೆ, ಬೆಳಗಾವಿ ವಿಭಾಗ,**
**ಬೆಳಗಾ**

## <u>ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್</u>
## <u>ಅನುಬಂದ–1</u>

1) ಈ ಅಧ್ಯಾಯದಲ್ಲಿ ಕಾಣಿಸಿದಂತೆ ಈ ಕೆಳಕಂಡ ಟೇಬಲ್‌ದಲ್ಲಿ ಕಾಣಿಸಿದ ಅಂಶಗಳು ಟೆಂಡರಗೆ ಸಂಬಂಧಿಸಿದಂತೆ ಪೂರಕ ಅಂಶಗಳಾಗಿರುತ್ತವೆ. ಆದ್ದರಿಂದ ಎಲ್ಲ ಗುತ್ತಿಗೆದಾರರು ಈ ಕೆಳಕಂಡ ನಮೂನೆಯಲ್ಲಿ ಕಾಣಿಸಿದ ಎಲ್ಲ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ತಪ್ಪಿದಲ್ಲಿ ಟೆಂಡರುಗಳ ಪ್ರಾಥಮಿಕ ಪರಿಶೀಲನಾ ಸಮಯದಲ್ಲಿ ಟೆಂಡರಗೆ ಪೂರಕವಾದ ಅಂಶಗಳು ಇಲ್ಲವೆಂದು ಪರಿಗಣಿಸಿ ತಿರಸ್ಕರಿಸಲಾಗುವುದು.

2) ಬಿಡ್ಡುದಾರರು ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದಾಗಿರುತ್ತದೆ.

ಎ) ಬಿಡ್ಡುದಾರರು ಕಳೆದ 3 ವರ್ಷಗಳಿಂದ ಕರ್ನಾಟಕದಲ್ಲಿ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಸುವ ಮತ್ತು ಸ್ಥಾಪಿಸಿದ ಬಗ್ಗೆ ಮಾಹಿತಿಯ ದಾಖಲೆ ಸಲ್ಲಿಸುವುದು.

ಬಿ) ಬಿಡ್ಡುದಾರರು ತಮ್ಮ ಕೇಂದ್ರಕಚೇರಿಯನ್ನು ಕರ್ನಾಟಕದಲ್ಲಿ ಹೊಂದಿರುವ ಬಗ್ಗೆ ದಾಖಲೆ ಸಲ್ಲಿಸುವುದು.

ಸಿ) ಬಿಡ್ಡುದಾರರು ಕಳೆದ 3 ವರ್ಷಗಳಲ್ಲಿ ರಾಜ್ಯ/ಕೇಂದ್ರ ಸರ್ಕಾರದ/ಅಂಗೀಕೃತ/ಮಾನ್ಯತೆ ಪಡೆದ ಇಲಾಖೆ/ಸಂಸ್ಥೆಗಳಿಗೆ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳನ್ನು ಪೂರೈಸಿದ ಮತ್ತು ಸ್ಥಾಪಿಸಿದ ಬಗ್ಗೆ ದಾಖಲೆ ಸಲ್ಲಿಸುವುದು. ಹಾಗೂ ಚಾಲ್ತಿ ಆರ್ಥಿಕ ವರ್ಷದಲ್ಲಿ ಯಾವ ಯಾವ ಇಲಾಖೆ/ಸಂಸ್ಥೆಗಳಿಗೆ ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳ ಪೂರೈಸುವ ಮತ್ತು ಸ್ಥಾಪಿಸಿದ ಬಗ್ಗೆ ದಾಖಲೆ ಮತ್ತು ಕೆಲಸದ ಆದೇಶ ಪಡೆದ ಬಗ್ಗೆ ದಾಖಲೆ ಸಲ್ಲಿಸುವುದು.

## <u>ಅನುಬಂಧ–1.</u>

**ಬಿಡ್ದುದಾರರು ಈ ಕೆಳಕಂಡ ಸಾಮಾನ್ಯ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು:–**

| ಕ್ರ.ಸಂ. | | ವಿವರಗಳು. | | |
|---|---|---|---|---|
| **1** | | ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ | | |
| **2** | | ಗುತ್ತಿಗೆದಾರರು ವೈಯಕ್ತಿಕ ಸಂಸ್ಥೆಯಾದಲ್ಲಿ ಮಾಲೀಕರ ಹೆಸರು/ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರರ ಹೆಸರುಗಳು/ಕಂಪನಿ–ಸಂಸ್ಥೆಯಾಗಿದ್ದಲ್ಲಿ | | |
| | 1 | ಪ್ರೆಸಿಡೆಂಟ/ಕಾರ್ಯನಿರ್ವಾಹಕ ನಿರ್ದೇಶಕರ ಹೆಸರು. | | |
| | 2 | ದೂರವಾಣಿ ಸಂಖ್ಯೆ: | | |
| | 3 | ಫ್ಯಾಕ್ಸ ಸಂಖ್ಯೆ | | |
| | 4 | ಈ–ಮೇಲ್ ಐ.ಡಿ. | | |
| **3** | | ವ್ಯವಹಾರದ ಸ್ವರೂಪ | | |
| | 1) | ಕಂಪನಿ (ಕಂಪನಿಯಾಗಿದ್ದಲ್ಲಿ ನೊಂದಣಿ ಸಂಖ್ಯೆ) | | |
| | 2) | ಸಾರ್ವಜನಿಕ ಕಂಪನಿ. | | |
| | 3) | ಪಾಲುದಾರಿಕೆ ಸಂಸ್ಥೆ. | | |
| | 4) | ಮಾಲೀಕತ್ವ. | | |
| **4** | | ವ್ಯವಹಾರ ಪ್ರಾರಂಭಿಸಿದ ದಿನಾಂಕ | | |
| **5** | | ಪಾಲುದಾರಿಕೆ ಸಂಸ್ಥಯಾಗಿದ್ದಲ್ಲಿ<br><br>ಎಲ್ಲ ಪಾಲುದಾರರ/ಕಂಪನಿಯಾಗಿದ್ದಲ್ಲಿ ಎಲ್ಲ ನಿರ್ದೇಶಕರ<br><br>ಹೆಸರು<br><br>ದೂರವಾಣಿ ನಂ:<br><br>ಸೆಲ್ ನಂ:<br><br>ಈ–ಮೇಲ ಐ.ಡಿ. | | |

| | | |
|---|---|---|
| **6** | ಈ.ಎಮ್.ಡಿ. ಮೊತ್ತವನ್ನು (ರೂ. 50000/–)<br>ಡಿ.ಡಿ.ಮುಖಾಂತರ ವಾಣಿಜ್ಯ ತೆರಿಗೆಗಳ ಜಂಟಿ<br>ಆಯುಕ್ತರು, (ಆಡಳಿತ), ಡಿ.ವಿ.ಓ. ಬೆಳಗಾವಿ.<br>ಹೆಸರಿನಲ್ಲಿ ನೀಡಬೇಕು.<br>ಬ್ಯಾಂಕಿನ ಹೆಸರು/ಡಿ.ಡಿ.ನಂಬರು ಮತ್ತು ದಿನಾಂಕ | ರೂ. |
| **7** | ಬಿಡರದಾರನ ಪ್ರತಿನಿಧಿಯ ವಿವರ:<br>ಹೆಸರು & ವಿಳಾಸ:<br>ದೂರವಾಣಿ & ಮೊಬೈಲ್ ಸಂಖ್ಯೆ:<br>ಇಮೇಲ್ ಐ.ಡಿ: | |
| **8** | ಸ್ಟೀಲರ್‍ಯಾಕುಗಳನ್ನು , ಪಿಠೋಪಕರಣಳನ್ನು ಪೂರೈಸುವ ಮತ್ತು<br>ಸ್ಥಾಪಿಸಿದ<br>ಬಗ್ಗೆ ಅನುಭವದ ವಿವರ ಕುರಿತು ಮಾಹಿತಿ / ಸರಕಾರಿ<br>ಕಚೇರಿಗಳಿಗೆ ಪೂರೈಕೆ ಮಾಡಿದ ಮಾಹಿತಿ /<br>ಸಾರ್ವಜನಿಕ ಸಂಸ್ಥೆಗಳಿಗೆ ಪೂರೈಕೆ ಮಾಡಿದ ವಿವರ.<br>ಪೂರೈಕೆ ಮಾಡಿದ ಕಚೇರಿಗಳ ವಿಳಾಸ:<br>ದೂರವಾಣಿ ಸಂಖ್ಯೆ: | |

ಸ್ಥಳ:
ದಿನಾಂಕ:

ಅಧಿಕೃತ ವ್ಯಕ್ತಿ/ ಪ್ರತಿನಿಧಿಯ ಸಹಿ

ಹೆಸರು:

ಪದನಾಮ:

ಮೊಹರು:

ಮತ್ಯಾವುದಾದರು ಅನುಬಂಧಗಳು ಇದ್ದಲ್ಲಿ.

# <u>ಅನುಬಂಧ – 2</u>

## ಫೈನಾನ್ಸಿಯಲ್ ಬಿಡ್.

| | | |
|---|---|---|
| **1)** | ಸಂಸ್ಥೆಯ ಹೆಸರು | |
| **2)** | ಸಂಸ್ಥೆ ವಿಳಾಸ. | |
| **3)** | ದೂರವಾಣಿ ಸಂಖ್ಯೆ | |
| **4)** | ಪ್ಯಾನ ಸಂಖ್ಯೆ | |
| **5)** | ನೋಂದಣಿ ಸಂಖ್ಯೆ | |
| **ಬೆಳಗಾವಿಯಲ್ಲಿರುವ ವಾಣಿಜ್ಯ ತೆರಿಗೆ ಕಟ್ಟಡಕ್ಕೆ ಮತ್ತು ಈ ವಿಭಾಗದ ಆಧೀನ ಕಚೇರಿಗಳಿಗೆ ಪೂರೈಕೆ ಮಾಡಬೇಕಾದ ಪೀಠೋಪಕೆಣಗಳ ವಿವರಗಳ ಕುರಿತ ಫೈನಾನ್ಸಿಯಲ್ ಬಿಡ್** | | |
| ಕ್ರ. ಸಂ | ವಿವರ | ಮೊಬಲಗು (ಎಲ್ಲ ರೀತಿಯ ತೆರಿಗೆ ಹಾಗೂ ಶುಲ್ಕಗಳನ್ನು ಒಳಗೊಂಡಿರುತ್ತದೆ.) |
| 6) | ಪ್ರತಿಯೊಂದು ಸ್ಟೀಲ ರ್‍ಯಾಕಿನ ಪೂರೈಕೆ ಮತ್ತು ಸ್ಥಾಪಿಸುವ ಕಾರ್ಯದ ಬಾಬತ್ತು (Supply & Fixing) | **<u>ಎತ್ತರ</u>** **ರೂ.** **ರೂ.**<br>**<u>(ಅಡಿಯಲ್ಲಿ)</u>** **<u>ಶೀಟುಗಳು</u>** (ಅಂಕಿಗಳಲ್ಲಿ) (ಅಕ್ಷರಗಳಲ್ಲಿ)<br>1) 11 7 ________<br>2) 10 7 ________<br>2) 8,1/2 6 ________<br>4) 7 6 ________<br>5) 4 3 ________<br>6) 3,1/2 3 ________ |
| 7) | Almira: 6,1/2′x3′x18″(20 guage CRC sheet). | ದರ ಒಂದಕ್ಕೆ ರೂ. |
| 8) | Visitors Chair: Pipe frame powder coated with seat @ back cushioned. | ದರ ಒಂದಕ್ಕೆ ರೂ. |
| 9) | Executive Table: 4.1/2′x2.1/2′( one side three drawers & steel frame and heavy plywood sunmyca top teak wood border. | ದರ ಒಂದಕ್ಕೆ ರೂ. |
| 10) | Executive Chair with revolving gas lift, cushioned with PU arm rest. | ದರ ಒಂದಕ್ಕೆ ರೂ. |

| | | |
|---|---|---|
| 11) | Staff Table: 4.1/2'x2.1/2' with 1 key board and 1 UPS stand and one side three drawers and steel frame and heavy plywood sunmyca top teak wood border. | ದರ ಒಂದಕ್ಕೆ ರೂ. |
| 12) | Staff chair: | ದರ ಒಂದಕ್ಕೆ ರೂ. |
| 13) | Computer table: 2.1/2'x 2'x2.1/2' made of pipe powder coated frame with top, UPS, CPU, ext made of prelaminated board. | ದರ ಒಂದಕ್ಕೆ ರೂ. |
| 14) | Computer chair revolving gas lift, Seat back moulded cushion with PU arm rest. | ದರ ಒಂದಕ್ಕೆ ರೂ. |
| 15) | Providing supplying and fixing aluminium partitions with single openable door using of jindal 15 micron anodized section 63.5 mm x 44.45 mm 2.25 mm thick 4.2 kg. door vertical 47.62mm x 44.45 mm 2.25 thick 3.00 kg door bottom 114.30mm x 44.45mm 2.25mm thick 5.2kg door top and centre 50mm x 44.45mm 4kg 12 feet length half of Glazing clips 19mm x 17.39mm using of 12mm prilamination Board necessary of door lock EPDM Rubber Gas kit handle and tower bolt etc. complete. (Rate in Sq. Ft.) | ದರ ಒಂದು ಚದರ ಅಡಿ. ರೂ. |

ಸ್ಥಳ:

ದಿನಾಂಕ: ಅಧಿಕೃತ ವ್ಯಕ್ತಿ/ಪ್ರತಿನಿಧಿಯ ರುಜು

ಹೆಸರು: ಮೊಹರು

**ಅನುಭಂದ – 3**

**ಅಲ್ಯೂಮಿನಿಯಂ ಪಾರ್ಟಿಶನ ಹಾಗೂ ಪೀಠೋಪಕರಣಗಳನ್ನು ಪೂರೈಸುವ ಮತ್ತು ಸ್ಥಾಪಿಸುವ ಸ್ಥಳಗಳ ಹೆಸರು ಮತ್ತು ವಿಳಾಸ**

| ಕ್ರ.ಸಂ | ಕಚೇರಿಯ ವಿಳಾಸ | ಕಚೇರಿಯ ದೂರವಾಣಿ ಸಂಖ್ಯೆ |
|---|---|---|
| 1 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –380, ಕ್ಲಬ ರಸ್ತೆ, ಬೆಳಗಾವಿ | 0831–2407388 |
| 2 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –390, ಕ್ಲಬ ರಸ್ತೆ, ಬೆಳಗಾವಿ | 0831–2407392 |
| 3 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –400, ನಿಪ್ಪಾಣಿ. | 08338–220174 |
| 4 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –410, ಬೈಲಹೋಂಗಲ | 08288–237173 |
| 5 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –420, ಬಾಗಲಕೋಟ. | 08354–235717 |
| 6 | ವಾಣಿಜ್ಯತೆರಿಗೆ ಸಹಾಯಕ ಆಯುಕ್ತರು, LVO –430,ಜಮಖಂಡಿ. | 08353–220062 |
| 7 | ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, LVO –440, ಬಿಜಾಪೂರ | 08352–270471 |
| 8 | ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, LVO –450, ಬಿಜಾಪೂರ | 08352–270287 |
| 9 | ವಾಣಿಜ್ಯ ತೆರಿಗೆ ಅಧಿಕಾರಿಗಳು, VSO –381 ಸಂಕೇಶ್ವರ | 08333–274060 |
| 10 | ವಾಣಿಜ್ಯ ತೆರಿಗೆ ಅಧಿಕಾರಿಗಳು, VSO –382 ಅಥಣಿ. | 9845754628 |
| 11 | ವಾಣಿಜ್ಯ ತೆರಿಗೆ ಅಧಿಕಾರಿಗಳು, VSO –401 ಗೋಕಾಕ. | 08332–225125 |
| 12 | ವಾಣಿಜ್ಯ ತೆರಿಗೆ ಅಧಿಕಾರಿಗಳು, VSO –421 ಮುದ್ದೇಬಿಃಆಳ. | 08356–220222 |
| 13 | ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಮೌ. ವ. ತೆ. ಕ್ಲಬ ರಸ್ತೆ, ಬೆಳಗಾವಿ. | 0831–2407366 |

ಸ್ಥಳ:

ದಿನಾಂಕ:

ಅಧಿಕೃತ ವ್ಯಕ್ತಿ/ಪ್ರತಿನಿಧಿಯ ರುಜು.
ಹೆಸರು:
ಹುದ್ದೆ.
ಮೊಹರು.

## <u>ಅನುಬಂಧ–4–ಎ</u>

**ಪೀಠೋಪಕರಣಗಳನ್ನು ಪೂರೈಸುವ ಮತ್ತು ಸ್ಥಾಪಿಸುವ ಸ್ಥಳಗಳ ಹೆಸರು ಮತ್ತು ಪ್ರಮಾಣ.**

| ಕ್ರ. ಸಂ. | ಕಛೇರಿಯ ಹೆಸರು | ಪಿಠೋಪಕರಣಗಳ ವಿವಿರ | | | | | | | | ಸ್ಟೀಲರ್‍ಯಾಕಿನ ವಿವಿರ | | | | |
|---|---|---|---|---|---|---|---|---|---|---|---|---|---|---|
| | | ಅಲ್ಮೆರಾ | ಸಂದರ್ಶಕರ ಖುರ್ಚಿ | ಅಧಿಕಾರಿಗಳ ಟೇಬಲ | ಅಧಿಕಾರಿಗಳ ಖುರ್ಚಿ | ಸಿಬ್ಬಂದಿ ಟೇಬಲ | ಸಿಬ್ಬಂದಿ ಖುರ್ಚಿ | ಕಂಪ್ಯೂಟರ ಟೇಬಲ | ತಿರುಗುವ ಖುರ್ಚಿ | ಪ್ರಮಾಣ | ಎತ್ತರ (ಅಡಿಯಲ್ಲಿ) | ಅಗಲ (ಅಡಿಯಲ್ಲಿ) | Depth (ಇಂಚಿನಲ್ಲಿ | ಶೀಟಗಳ ಸಂಖ್ಯೆ. |
| **1** | LVO-380, ಕ್ಲಬ ರಸ್ತೆ, ಬೆಳಗಾವಿ | 02 | 08 | – | – | 03 | – | 01 | – | 20 | 11 | 3 | 18 | 7 |
| **2** | LVO–390, ಕ್ಲಬ ರಸ್ತೆ, ಬೆಳಗಾವಿ | 04 | 08 | – | 02 | 03 | 04 | – | – | 25 | 11 | 3 | 18 | 7 |
| **3** | LVO-400, ನಿಪ್ಪಾಣಿ. | 03 | 06 | – | 01 | – | – | – | – | 06 | 12 | 3 | 18 | 7 |
| **4** | LVO–410, ಬೈಲಹೋಂಗಲ | 02 | 06 | 01 | 01 | – | – | – | – | 05 | 08 | 3 | 18 | 6 |
| **5** | LVO–420, ಬಾಗಲಕೋಟ. | 06 | – | – | – | 03 | 06 | – | – | 10 | 10 | 3 | 18 | 7 |
| **6** | LVO–430 ಜಮಖಂಡಿ, | 05 | 08 | – | 01 | 02 | 02 | – | – | 15 | 10 | 3 | 18 | 7 |
| **7** | LVO–440,ಬಿಜಾಪೂರ. | 06 | – | – | – | – | – | 01 | 01 | 15 | 12 | 3 | 18 | 7 |
| **8** | LVO-450,ಬಿಜಾಪೂರ. | 06 | 08 | – | 01 | 02 | 01 | – | – | 15 | 12 | 3 | 18 | 7 |
| **9** | VSO –381,ಸಂಕೇಶ್ವರ | 02 | – | – | 01 | 03 | 05 | 02 | 02 | 18 | 12 | 3 | 18 | 7 |
| **10** | VSO –382, ಅಥಣಿ. | 04 | – | – | 01 | – | 02 | 02 | 02 | 12<br>04 | 7<br>4 | 3 | 18 | 6<br>3 |
| **11** | VSO –401, ಗೋಕಾಕ | 05 | 06 | – | – | 02 | 04 | 02 | 04 | 10 | 3,1/2 | 3 | 18 | 2 |
| **12** | VSO–421, ಮುದ್ದೆಬಿಹಾಳ. | – | 08 | – | 01 | – | – | 03 | 03 | 08 | 10 | 3 | 18 | 7 |
| **13** | ವಾ.ತೆ.ಜಂ.ಆ. (DVO), ಬೆಳಗಾವಿ. | 15 | | – | | – | – | – | – | – | – | - | – | – |
| | **ಒಟ್ಟು** | 60 | 58 | 01 | 09 | 18 | 24 | 11 | 12 | 163 | – | - | – | – |

**ಸೂಚನೆ: ಎಲ್ಲ ಸ್ಟೀಲ್ ರ್‍ಯಾಕಗಳ ಎಂಗಲ್‌ನ ಗೇಜು 14 ಮತ್ತು ಶೀಟುಗಳ ಗೇಜು 16 ಇರತಕ್ಕದ್ದು.**

ಸ್ಥಳ: .ದಿನಾಂಕ: ಅಧಿಕೃತ ವ್ಯಕ್ತಿ/ಪ್ರತಿನಿಧಿಯ ರುಜು ಹೆಸರು ಹುದ್ದೆ

ಮೊಹರು

## ಅನುಬಂಧ–4–ಬಿ

**ಅಭಿಲೇಖಾಲಯಕ್ಕಾಗಿ (Record Room) ಅಲ್ಯೂಮಿನಿಯಂ ಪಾರ್ಟಿಶನ ಪೂರೈಸುವ ಮತ್ತು ಸ್ಥಾಪಿಸುವ ಸ್ಥಳಗಳ ಹೆಸರು.**

| ಕ್ರ. ಸಂ. | ಕಛೇರಿಯ ಹೆಸರು | ಅಂದಾಜು ಅಳತೆ.(ಅಡಿಗಳಲ್ಲಿ) |
|---|---|---|
| 1 | LVO-380, ಕ್ಲಬ ರಸ್ತೆ, ಬೆಳಗಾವಿ | 12x11 |
| 2 | LVO–390, ಕ್ಲಬ ರಸ್ತೆ, ಬೆಳಗಾವಿ | 12x11 |
| 3 | LVO-400, ನಿಪ್ಪಾಣಿ. | 9.2x 14x12 |
| 4 | LVO–410, ಬೈಲಹೋಂಗಲ | 9.10x13.8 |
| 5 | LVO–430 ಜಮಖಂಡಿ, | 12x17 |

ಸ್ಥಳ:
ದಿನಾಂಕ:

ಅಧಿಕೃತ ವ್ಯಕ್ತಿ/ಪ್ರತಿನಿಧಿಯ ರುಜು.
ಹೆಸರು:
ಹುದ್ದೆ.
ಮೊಹರು.